ಓ. ಎಸ್. ನಂ:29/2015

ಪಿ. ಡಬ್ಲ್ಯೂ: 2

ದಿ:21-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ ಎಸ್ ಎಲ್ ಎಸ್ **2** ನೇ ಪ್ರತಿವಾದಿ ಪರ ವಕೀಲರಿಂದ ಃ

ಈ ಹಿಂದೆ ನಾನು ಯಾವ ಕೇಸನಲ್ಲಿಯೂ ಸಾಕ್ಷಿ ನುಡಿದಿಲ್ಲ. ನನಗೆ ಓದಲು ಬರೆಯಲು ಬರುವುದಿಲ್ಲ.ನಾನು ಶಾಲೆ ಕಲಿತಿಲ್ಲ. ನನಗೆ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ ಬಂದಿರುತ್ತದೆ. 2-3 ತಿಂಗಳು ಹಿಂದೆ ನನಗೆ ಸಮನ್ಸ ಬಂದಿತ್ತು.ನನ್ನ ಹತ್ತಿರ ಸಮನ್ಸ ಇರುತ್ತದೆ ಆದರೆ ನ್ಯಾಯಾಲಯಕ್ಕೆ ತಂದಿರುವುದಿಲ್ಲ. ನನಗೆ ಯಾವುದೇ ಸಮನ್ಸ ಬರದೇ ಇದ್ದರೂ ಸಮನ್ಸ ಬಂದಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಯಾವ ಯಾವ ಸರ್ವೆ ನಂಬರಗಳಿಗೆ ಮತ್ತು ಎಷ್ಟು ಸರ್ವೆ ನಂಬರಗಳಿಗೆ ಈ ದಾವೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು 14 ಮತ್ತು 15 ಎಂದು ನುಡಿಯುತ್ತಾರೆ. ಸದರಿ 2 ಸರ್ವೆ ನಂಬರಗಳು ಅಷ್ಟಕ್ಕೆ ಈ ದಾವೆಯನ್ನು ಹಾಕಿರುತ್ತಾರೆ . ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನು ಹೇಳಿದ್ದೇ ಅವರು ಬರೆದುಕೊಂಡಿರುತ್ತಾರೆ ಸಾಕ್ಷಿ ಹೇಳಲು ವಾದಿ ಕರೆದರು. ಈ ದಾವೆಯನ್ನು ಎಷ್ಟು ಜನರು ಹಾಕಿರುತ್ತಾರೆ ಮತ್ತು ಯಾರ ಮೇಲೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು 8 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಮೇಲೆ ಹಾಕಿರುತ್ತಾರೆ ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಆಸ್ತಿ ಯಾರದು ಇತ್ತು ಎಂದು ನೀವು ನೋಡಿಲ್ಲ ಎಂದರೆ ಸಾಕ್ಷಿಯು ಅದು ಚಂದ್ರಶೇಖರ ಹೆಸರಿನಲ್ಲಿ ಇತ್ತು ಅವರ ಮಕ್ಕಳಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ನೀವು ಅವರ ದಾಖಲೆ ನೋಡಿರುವಿರಾ ಎಂದರೆ ಸಾಕ್ಷಿಯು ಬೇರೆಯವರ ದಾಖಲೆಯನ್ನು ನಾನು ನೋಡಲು ಹೋಗುವುದಿಲ್ಲ ಎಂದು ನುಡಿಯುತ್ತಾರೆ . ನನ್ನನ್ನು ಮತ್ತು ಪಿಡಬ್ಲ್ಯಾ-3 ಯನ್ನು ವಾದಿಯವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಸಮನ್ಸ ಬಂದಿದಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬರುವಾಗ ವಾದಿ ಮತ್ತು ನಾಗರಾಜ ಒಂದಿಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ.ವಾದಿಯು ನನ್ನ ಸ್ನೇಹಿತ ಎಂದರೆ

ಸರಿಯಲ್ಲ. ವಾದಿಯವರು ನನ್ನ ಜೊತೆ ಚೆನ್ನಾಗಿ ಇರುತ್ತಾರೆ ಎಂದರೆ ಸರಿ. ನಾನು ಮತ್ತು ವಾದಿ ಆತ್ಮೀಯರು ಎಂದರೆ ಸರಿ.

2. ವಾದಿಯು ಈಗ ಅಂದಲಗಿಯಲ್ಲಿ ಇರುತ್ತಾರೆ . ವಾದಿಯು 7 ವರ್ಷದಿಂದ ಅಂದಲಗಿಯಲ್ಲಿ ಇರುತ್ತಾರೆ. ವಾದಿಯು ಅಲ್ಲಿ ಮನೆ ಮಾಡಿದ್ದು ಅಲ್ಲೇ ಇರುತ್ತಾರೆ. ವಾದಿಯ ದೊಡ್ಡಪ್ಪ ಅವರಿಗೆ ಮನೆಯನ್ನು ಕೊಟ್ಟಿದ್ದು ಅವರು ಅಲ್ಲಿಯೇ ಇರುತ್ತಾರೆ ದೊಡ್ಡಪ್ಪನ ಹೆಸರು ಕಂತೇಯ್ಯ ಇರುತ್ತದೆ. ಕಂತೇಯ್ಯ ಅವರ ಮನೆ ಹೊಲ ಅಂದಲಗಿಯಲ್ಲಿ ಇರುತ್ತದೆ , ಅವರು ತೀರಿಕೊಂಡ ನಂತರ ಅವರ ಮನೆ ಮತ್ತು ಹೊಲಕ್ಕೆ ವಾದಿಯವರ ಹೆಸರು ಬರುತ್ತಿದೆ ಎಂದರೆ ಸರಿ. ಕಂತೇಯ್ಯ ಅವರಿಗೆ ಗಂಡು ಮಕ್ಕಳು ಇರಲಿಲ್ಲ. ಕಂತೇಯ್ಯ ಅವರು ಜೀವಂತ ಇದ್ದಾಗ ವಾದಿ ಉಮೇಶಯ್ಯ ಅವರೊಂದಿಗೆ ಇದ್ದರು ಎಂದರೆ ಸರಿ. ಆಗು ಹೋಗಳು ನೀವೇ ನೋಡಿಕೊಂಡಿರುವಿರಿ ಎಂದರೆ ಸಾಕ್ಷಿಯು ಸಾಯುವವರೆಗೆ ಅವನೇ ನೋಡಿಕೊಂಡಿದ್ದನು ಎಂದು ನುಡಿಯುತ್ತಾರೆ . ಕಂತೇಯ್ಯ ತೀರಿಕೊಂಡು 20 ವರ್ಷ ಆಗಿರುತ್ತದೆ . ಕಂತೇಯ್ಯ ತೀರಿಕೊಂಡಾಗ ಅವರ ಹೆಂಡತಿ ತೀರಿಕೊಂಡಿದ್ದರು. ಕಂತೇಯ್ಯ ಅವರ ಹೆಂಡತಿ ಹೆಸರು ಪಾರಮ್ಮ ಇತ್ತು. ಪಾರಮ್ಮ ಮತ್ತು ಕಂತೇಯ್ಯ ಅವರ ಅಂತಿಮ ಕ್ರಿಯೇಗಳನ್ನು ವಾದಿ ಉಮೇಶ ಅವರು ಮಾಡಿರುತ್ತಾರೆ ಎಂದರೆ ಸರಿ. ಕಂತೇಯ್ಯ ತೀರಿಕೊಂಡ ನಂತರ ಅವನ ಆಸ್ತಿಗಳಿಗೆ ಉಮೇಶ ವಾದಿಯವರು ಹೆಸರು ದತ್ತಕ ಮಗ ಎಂದು ಬಂದಿರುತ್ತದೆ ಎಂದರೆ ಸಾಕ್ಷಿಯು ದತ್ತಕ ಮತ್ತು ಜನಕ ಮಗ ಆಗಿ ಬಂದಿರುವುದಿಲ್ಲ , ಮಗಳ ಮಗನನ್ನು ಕೊಟ್ಟಿದ್ದರಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಅಂದಲಗಿ ಗ್ರಾಮದ ಎಲ್ಲಾ ದಾಖಲೆಗಳಲ್ಲಿಯೂ ಸಹಿತ ಉಮೇಶಯ್ಯ ತಂದೆ ಕಂತೇಯ್ಯ ಎಂದು ಇರುತ್ತದೆ ಎಂದರೆ ಸಾಕ್ಷಿಯು ನಾನು ದಾಖಲೆ ನೋಡಿಲ್ಲ ಎಂದು ನುಡಿಯುತ್ತಾರೆ. ಊರಲ್ಲಿ ವಾದಿಯವರಿಗೆ ಕಂತೇಯ್ಯನ ಮಗ ಎಂದು ಕರೆಯುತ್ತಾರೆ ಎಂದರೆ ಸರಿಯಲ್ಲ.ಉಮೇಶ ಅವರ ತಂದೆಗೆ ಎನೆಂದು ಊರಲ್ಲಿ ಕರೆಯುತ್ತಾರೆ ಎಂದರೆ ಸಾಕ್ಷಿಯು ಕಂತೇಯ್ಯ ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ.

3. ನನಗೆ ಸರ್ವೆ ನಂಬರ 159 ಅಂದಲಗಿ ಗ್ರಾಮದಲ್ಲಿ ಇರುತ್ತದೆ .ಅಂದಲಗಿ ಮತ್ತು ಬಧ್ರಾಪುರ 5 ಕಿ ಮಿ ಅಂತರದಲ್ಲಿ ಇರುತ್ತದೆ. ಯಾವ ಯಾವ ಆಸ್ತಿಗಳು ಬಧ್ರಾಪುರದಲ್ಲಿ

ಇರುತ್ತದೆ ಯಾವ ಯಾವ ಆಸ್ತಿಗಳು ಅಂದಲಗಿಯಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.ಈ ದಾವೆಯು ಆಸ್ತಿ ಬೇಕೆಂದು ಮಾಡಿರುತ್ತಾರೆ. ಬಧ್ರಾಪುರ ಗ್ರಾಮದ ರಿ ಸ ನಂಬರ 15/1 , 15/2 ಆಸ್ತಿಗಳನ್ನು ಬೂದಾನ ಮಂಡಳಿಯವರು ಸದಾಶಿವಯ್ಯ ಅವರಿಗೆ 1976 ರಲ್ಲಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಯಾರು ಕೊಟ್ಟಿದ್ದಾರೆ ಅವನ ತಂದೆಯ ಆಸ್ತಿ ಅದು ಎಂದು ನುಡಿಯುತ್ತಾರೆ. ಅವನ ತಂದೆಯ ಆಸ್ತಿ ಅದು ಎಂದು ಯಾವ ಆದಾರದ ಮೇಲೆ ಹೇಳುತ್ತೀರಿ ಎಂದರೆ ಸಾಕ್ಷಿಯು ನನಗೆ ಗೊತ್ತಿದೆ ಅವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಉಮೇಶ ಅವರು ಕಂತೇಯ್ಯ ಅವರಿಗೆ ದತ್ತಕ್ಕೆ ಹೋಗಿದ್ದರಿಂದ ಜನಕ ತಂದೆಯ ಆಸ್ತಿಯಲ್ಲಿ ಅವರಿಗೆ ಹಕ್ಕು ಇಲ್ಲ ಎಂದರೆ ಸಾಕ್ಷಿಯು ದತ್ತಕ ಹೋಗಿಲ್ಲ ಎಂದು ನುಡಿಯುತ್ತಾರೆ. ಉಮೇಶ ವಾದಿಯು ನನ್ನ ಸ್ನೇಹಿತ ಆಗಿದ್ದರಿಂದ ಅವರಿಗೆ ಅನುಕೂಲವಾಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ನೀವು ನಿಮ್ಮ ಸಾಕ್ಷಿ ಪ್ರುಮಾಣ ಪತ್ರದಲ್ಲಿ ಕೊಟ್ಟಿ ದಾಖಲೆ ಎಂದು ಬರೆದಿದ್ದು ಅದು ಯಾವ ದಾಖಲೆ ಎಂದರೆ ಸಾಕ್ಷಿಯು ಉತ್ತರಿಸಲಿಲ್ಲ. ಎಷ್ಟು ಮನೆ ಮತ್ತು ಖುಲ್ಲಾ ಜಾಗ ಮತ್ತು ಅವುಗಳ ನಂಬರ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಹಳೆ ಮನೆ ನಂಬರ 20 ಇತ್ತು ಈಗ ಎನಿದೆ ಎಂದು ಗೊತ್ತಿಲ್ಲ 7 ಜನರಿಗೆ 7 ಮನೆ ಇದೆ ಎಂದು ನುಡಿಯುತ್ತಾರೆ. ಸದರಿ 7 ಮನೆಗಳ ಬಗ್ಗೆ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಹಳೇ ಮನೆ ನಂಬರ ಬರೆದಿರುತ್ತೇನೆ ಎಂದು ನುಡಿಯುತ್ತಾರೆ.ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯುವ ಕಾಲಕ್ಕೆ ಹಳೆ ಮನೆ ಅಷ್ಟೇ ಇತ್ತು 7 ಮನೆ ಇರಲಿಲ್ಲ. ಸದರಿ 7 ಮನೆಗಳನ್ನು ಯಾವ ವರ್ಷದಲ್ಲಿ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಯಾವಾಗ ಮಾಡಿರುತ್ತೇನೆ ಎಂದು ನನಗೆ ದಿನಾಂಕ ಗೊತ್ತಾಗುವುದಿಲ್ಲ. ನಿಮ್ಮ ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರು ಟೈಪ ಮಾಡಿ ನಿಮಗೆ ಸಹಿ ಮಾಡಲು ಹೇಳಿದ್ದು ನೀವು ಮಾಡಿರುವಿರಿ ಎಂದರೆ ಸಾಕ್ಷಿಯು ನಾನು ಹೇಳಿದ ನಂತರ ಅವರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

4. ಉಮೇಶಯ್ಯ ಅವನ ಶಾಲೆ ದಾಖಲಾತಿಯಲ್ಲಿ ಮತ್ತು ಹೊಲದ ಉತಾರಗಳಲ್ಲಿ ದತ್ತಕ ತಂದೆಯ ಹೆಸರು ಕಾಂತೇಯ್ಯ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿಯು ದತ್ತಕ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದು

ನಾನು ದಾಖಲೆ ನೋಡಿರುವುದಿಲ್ಲ.ಅಂದಲಗಿಯಲ್ಲಿನ ಆಸ್ತಿಗಳು ಉಮೇಶಗೆ ಕಂತೇಯ್ಯ ಅವರಿಂದ ಹೇಗೆ ಬಂತು ಎಂದರೆ ಸಾಕ್ಷಿಯು ಕಂತೇಯ್ಯ ಅವರಿಗೆ 3 ಜನ ಹೆಣ್ಣು ಮಕ್ಕಳು ಇದ್ದು ಅದರಲ್ಲಿ ಒಬ್ಬಳು ಹೆಣ್ಣು ಮಗಳಿಗೆ ಮದುವೆ ಮಾಡಿಕೊಟ್ಟು, ಆ ಆಸ್ತಿ ಜೋಪಾನ ಮಾಡಿದಕ್ಕೆ ಅವನಿಗೆ ಕೊಡಲು ಹೇಳಿದ್ದಕ್ಕೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಕಂತೇಯ್ಯ ಅವರ ಉಳಿದ ಇಬ್ಬರು ಹೆಣ್ಣು ಮಕ್ಕಳಿಗೆ ಮತ್ತು ಅಳಿಯಂದರಿಗೆ ಆಸ್ತಿ ಕೊಟ್ಟಿಲ್ಲ ಒಬ್ಬರಿಗೆ ಮಾತ್ರ ಕೊಟ್ಟಿರುತ್ತಾರೆ. ವಾದಿ ಉಮೇಶಯ್ಯ ಸಣ್ಣವನಿದ್ದನಿಂದಲೂ ಅಂದಲಗಿಯಲ್ಲಿಯೇ ಶಾಲೆ ಕಲಿತಿರುತ್ತಾರೆ ಎಂದರೆ ಸರಿ. ಶಾಲಾ ಸರ್ಟಿಫಿಕೇಟನಲ್ಲಿ ಉಮೇಶಯ್ಯ ದತ್ತಕ ತಂದೆ ಕಂತೇಯ್ಯ ಎಂದು ನಮೂದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎನು ಗೊತ್ತಿಲ್ಲದೇ ಇದ್ದರೂ ನಾನು ವಾದಿಗೆ ಅನುಕೂಲವಾಗಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 3 ರಿಂದ 13 ನೇ ಪ್ರತಿವಾದಿ ಪರ ವಕೀಲರು ಸದರಿ ಪಾಟೀ ಸವಾಲನ್ನು ತನ್ನ ಪಾಟೀ ಸವಾಲು ಕೂಡ ಎಂದು ಪರಿಗಣಿಸಲು ಕೋರಿರುತ್ತಾರೆ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.